

## ಹೇಗಿದ್ದರೆ ಚಂದ?

ಡ್ರೆಸ್‌ಕೋಡ್, ಯೂನಿಫಾರಂ ಹೊರತಾಗಿ ಶೋಕಿಗೂ ಟೈಯನ್ನು ಕಟ್ಟುತ್ತಾರೆ. ಆದರಿಂದ ಸಾಮಾಜಿಕ ಗೌರವ ಹೆಚ್ಚುತ್ತದೆ ಎನ್ನುವ ನಂಬಿಕೆಯೂ ಇದೆ. ಇದೇ ಕಾರಣಕ್ಕೆ ನಾನಾ ರೀತಿಯ ಸ್ಟೈಲಿಷ್ ಟೈಗಳು ಬಂದಿವೆ. ಬಜೆಟ್ ನೋಡಿ ಖರೀದಿ ಮಾಡಿದರೂ ಅದರ ಬಣ್ಣ ಮತ್ತು ಅಗಲದ ಬಗ್ಗೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಟೈ ಕೇವಲ ಫಾರ್ಮಲ್ ಡ್ರೆಸ್‌ಗೆ ಮಾತ್ರವಲ್ಲದೆ, ಸ್ಟೈಲಿಷ್ ಡ್ರೆಸ್‌ಗಳಿಗೂ ಹಾಕುತ್ತಿದ್ದಾರೆ. ಆದರೆ ಅದು ಧರಿಸುವವರ ಸೌಂದರ್ಯವನ್ನು ಹೆಚ್ಚಿಸಬೇಕು.

ಟೈ ಕಟ್ಟುವುದನ್ನು ಕಲಿಯಲು ಸಾಕಷ್ಟು ವಿಡಿಯೊಗಳು ಯೂಟ್ಯೂಬ್‌ನಲ್ಲಿ ಸಿಗುತ್ತವೆ. ಅದನ್ನು ನೋಡಿ ಸುಲಭ ಆಗುವ ಮಾದರಿಯನ್ನು ಅನುಸರಿಸಬಹುದು. ಸಾಮಾನ್ಯವಾಗಿ ಇಂಗ್ಲಿಷ್‌ನ 'ವಿ' ಸ್ವರೂಪದ ಕಟ್ಟು ಚಂದ ಕಾಣಿಸುತ್ತದೆ. ಅದೇ ರೀತಿಯಲ್ಲಿ ಕಟ್ಟಲು ಒಂದೆರಡು ಬಾರಿ ಅಭ್ಯಾಸ ಮಾಡಬೇಕಾಗುತ್ತದೆ. ಕಟ್ಟಿನ ಹಿಂಭಾಗದ ಎಳೆ ಹೊರಗಡೆ ಕಾಣದಂತೆ ಇರಬೇಕು. ಟೈ ಉದ್ದ ಕೂಡ ನಿಖರವಾಗಿ ಇರಬೇಕು. ಹೊಕ್ಕಳು ಮತ್ತು ಸೊಂಟದ ಬೆಲ್ಟ್‌ನ ಮಧ್ಯಕ್ಕೆ ಬರುವಂತೆ ಕಟ್ಟಬೇಕು. ಅದಕ್ಕಿಂತ ಉದ್ದವಾದರೂ ಅದರ ಲಕ್ಷಣ ಹಾಳಾಗುತ್ತದೆ. ಗಿಡ್ಡವಾದರೂ ಕೂಡ. ಟೈ ಮೇಲೆ ಸುಕ್ಕು ಬೀಳದಂತೆ ಇರಲಿ.



ಭಾಗವೇ ಫಾರ್ಮಲ್ ಮತ್ತು ಸೂಟಿಗೆ ಟೈ ಶಿಸ್ತಿನ ಪಟ್ಟಿಯಾಯಿತು. ಅದು ಕೋಟು ಮತ್ತು ಅಂಗಿಯ ಚಂದವನ್ನು ಬರೆಯುವ ರೇಖೆಯೂ ಆಗಿದೆ. ಟೈ ಕಟ್ಟುವುದು ನಾಜೂಕಿನ ಕೆಲಸ. ದುಡ್ಡು ಕೊಟ್ಟು ಅದನ್ನು ಖರೀದಿ ಮಾಡಿದ್ದಕ್ಕಿಂತ ಕಟ್ಟುವುದು ಕಷ್ಟ. ಅಂತಹ ಕುಸುರಿ ಕಲೆಯನ್ನು ಅಭ್ಯಾಸ ಬಲದಿಂದಲೇ ಕರಗತ ಮಾಡಿಕೊಳ್ಳಬೇಕು. ಬಣ್ಣ ಮತ್ತು ವಿನ್ಯಾಸದ ವೈವಿಧ್ಯದಂತೆ ಕಟ್ಟುವ ಕ್ರಮದಲ್ಲಿಯೂ ಭಿನ್ನತೆ ಉಂಟು. ಟೈ ಕಟ್ಟುವ ಕಲೆಗಾರಿಕೆಯನ್ನೇ ಬಾಬಾ ಸಾಹೇಬ್ ಅಂಬೇಡ್ಕರ್ 'ಭಾರತೀಯ ರಾಜಕೀಯ ನಾಯಕರ ಪೈಕಿ ತುಂಬ ಸೊಗಸಾಗಿ ಟೈಗೆ ಗಂಟು ಹಾಕುವ ಕಲೆ ಬರುತ್ತಿದ್ದುದು ಬ್ಯಾರಿಸ್ಟರ್ ಜಿನ್ನಾ ಮತ್ತು ನನಗೆ ಮಾತ್ರ' ಎಂದು ಹೇಳಿದ್ದರು.

ಪ್ರಸಿದ್ಧ ಸಾಹಿತಿ ಎಸ್.ವಿ. ರಂಗಣ್ಣ ಅವರಿಗೆ ಬಟ್ಟೆ ಧರಿಸುವುದರಲ್ಲಿ ಒಳ್ಳೆಯ ಅಭಿರುಚಿ ಇತ್ತು. ಅವರು ಯಾವುದೇ ಸಭೆ ಸಮಾರಂಭಗಳಿಗೆ ಹೋದರೂ ಆಕರ್ಷಣೀಯ ಸೂಟು ಅದಕ್ಕೆ ಒಪ್ಪುವ ಟೈ, ಮಿಂಚುವ ಬೂಟು ಧರಿಸುತ್ತಿದ್ದರಂತೆ. ಅವರು ಟೈ ಧರಿಸದೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಅಪರೂಪ ಎಂದು ಹೇಳುತ್ತಾರೆ. ಔಪಚಾರಿಕ, ಆಲಂಕಾರಿಕ ವಸ್ತ್ರದಂತೆ ಇರುವ ಟೈ ಕೆಲವೊಮ್ಮೆ ಡ್ರೆಸ್ ಕೋಡ್ ಆಗಿ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಕೆಲವು ಪ್ರತಿಷ್ಠಿತ ಅತಿಥಿಗಳ ಸಭೆ, ಕ್ಲಬ್‌ಗಳಲ್ಲಿ ಟೈ ಕಟ್ಟುವುದು ಕಡ್ಡಾಯವಾಗುತ್ತದೆ. ಅದು ಪ್ರತಿಷ್ಠೆಯ ಪ್ರತೀಕ ಎನ್ನುವ ಭಾವನೆ. ಮಾತ್ರವಲ್ಲ, ಅದರ ಧಾರಣೆ ಗಂಭೀರ ವ್ಯಕ್ತಿತ್ವವನ್ನು ಬಿಂಬಿಸುತ್ತದೆ ಎನ್ನಲಾಗುತ್ತದೆ. ಒಂದು ಕಾಲದಲ್ಲಿ ಟೈ ಕಟ್ಟಿಸಿ, ಕೋಟು ತೊಟ್ಟು ಫೋಟೊ ತೆಗೆಸಿ ಕಟ್ಟು ಕಟ್ಟಿಸಿ ಗೋಡೆಗೆ ನೇತುಹಾಕುವುದು ರೂಢಿಯಿತ್ತು. ಆಗೆಲ್ಲ ನಗರ, ಪಟ್ಟಣಗಳ ಪ್ರತಿ ಸ್ಟುಡಿಯೊದಲ್ಲಿ ಬಗೆಬಗೆ ಚಿತ್ರ ವಿನ್ಯಾಸದ ಗೋಡೆ, ಆ ಚಿತ್ರದ ಸನ್ನಿವೇಶಕ್ಕೆ ಹೊಂದಿಕೆಯಾಗುವ ಕೋಟು, ಟೈಗಳನ್ನು ಅಲ್ಲಿ ಇಟ್ಟಿರುತ್ತಿದ್ದರು.

### ಫ್ಯಾಷನ್‌ಪ್ರಿಯರ ಮೆಚ್ಚು

ಟೈ ಪಾಶ್ಚಾತ್ಯ ಮೂಲದಿಂದ ಬಂದಿದ್ದರೂ ಫ್ಯಾಷನ್ ಪ್ರೇಮಿಗಳ ಆಕರ್ಷಣೆಯ ವಸ್ತು. ಅದು ತಮ್ಮ ಸೌಂದರ್ಯಕ್ಕೆ ಮೆರುಗು ತುಂಬುತ್ತದೆ. ಹಾಗಾಗಿ ಸಮಾರಂಭಗಳಿಗೆ ಹೋಗುವ ಸಂಬಂಧ ಟೈ ಶಾಪಿಂಗ್ ಮಾಡುವುದೂ ಇದೆ. ವಿವಿಧ ಬಣ್ಣದ ಟೈಗಳನ್ನು ಸಂಗ್ರಹಿಸಿ ಇಡುವುದು ಕೆಲವರ ಶೋಕಿಯೂ ಹೌದು. ಆದರೆ ತೊಟ್ಟ ಅಂಗಿಗೆ ಸೂಕ್ತ ಬಣ್ಣದ ಟೈ ಹೊಂದಿಸುವುದು ಅವರ ಅಭಿರುಚಿಯನ್ನು ತೋರಿಸುತ್ತದೆ. ಹಾಗಾಗಿ ಎಚ್ಚರಿಕೆಯಿಂದ ಹತ್ತಾರು ಬಾರಿ ಯೋಚಿಸಿ, ಧರಿಸಿ, ಕನ್ನಡಿಯಲ್ಲಿ ನೋಡಿ ಆಪ್ತರನ್ನೆಲ್ಲ ಕೇಳಿಯೇ ಟೈ ಖರೀದಿಸುತ್ತಾರೆ.

ಅಂಗಿ ಮತ್ತು ಟೈ ಹೊಂದಿಕೆಯಾಗದೆ ಬಣ್ಣದಲ್ಲಿ ಏರುಪೇರಾದರೆ ಹಾಸ್ಯಾಸ್ಪದ. ಅದು ತಮಗೆ ಪ್ರತಿಷ್ಠಿತ ದಿರಿಸಿನ ಪ್ರಜ್ಞೆ ಇಲ್ಲ ಎಂದು ಜನ ಜರಿದಾರು ಎನ್ನುವ ಅಳುಕನ್ನು ಹುಟ್ಟುಹಾಕಿದೆ. ಹಾಗಾಗಿ ಟೈ ತೆಗೆದುಕೊಳ್ಳುವಾಗ ವಿಶೇಷ ಎಚ್ಚರಿಕೆ ವಹಿಸುತ್ತಾರೆ. ಒಂದೇ ಟೈ ಹಲವು ಶರ್ಟ್‌ಗೆ ಮ್ಯಾಚ್ ಮಾಡುವ ಕಲೆಗಾರಿಕೆಯೂ ಕೆಲವರಿಗೆ ಒಲಿದಿರುತ್ತದೆ. ಅಂತಹ ಅಭಿರುಚಿ ಇರುವ ಗೆಳೆಯರನ್ನು ಹುಡುಕಿ ಟೈ ಶಾಪಿಂಗ್ ಮಾಡುವ ಮಂದಿಯೂ ಇದ್ದಾರೆ.

ತೊಡುವ ಅಂಗಿ ತಮ್ಮ ವ್ಯಕ್ತಿತ್ವಕ್ಕೆ ಹೊಂದಿಕೆಯಾಗುವ ಟೈಯನ್ನೇ ತೆಗೆದುಕೊಳ್ಳಬೇಕು. ಟೈ ಪ್ರೇಮಿಗಳು ಯಾವ ಟೈಯನ್ನು ಯಾವ ಬಣ್ಣದ ಅಂಗಿಗೆ ಸರಿ ಹೊಂದಿಸುತ್ತಾರೆ. ಅಂಗಿಯ ವಿನ್ಯಾಸಕ್ಕೆ ಟೈ ವಿನ್ಯಾಸ ಹೇಗಿರಬೇಕು ಎನ್ನುವ ಲೆಕ್ಕಾಚಾರ ಮುಖ್ಯ. ಪ್ಲೇನ್ ಟೈ ಅದ್ದೂರಿ ಕಾರ್ಯಕ್ರಮಗಳಲ್ಲಿ ತೊಡುವ ಅದ್ದೂರಿ ಡ್ರೆಸ್‌ಗೆ ಸೂಕ್ತ ಆಗಲಾರದು. ಆದರೆ ಅವು ಬಹು ಬಣ್ಣದ ಬಟ್ಟೆಗೆ ಹೊಂದಿಕೆಯಾಗುತ್ತವೆ. ಸಾಮಾನ್ಯವಾಗಿ ಅಂಗಿಯ ಬಣ್ಣಕ್ಕೆ ವಿರುದ್ಧ ಅನ್ನಿಸುವ ಬಣ್ಣದ ಟೈ ಚೆನ್ನಾಗಿರುತ್ತದೆ. ■